3


ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಮುಖ್ಯಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 28/1/2020


# ಭೂ ಖರೀದಿ ಕಾಯ್ದೆಗೆ ತಿದ್ದುಪಡಿ

28/1/20

- ಸಿಎಂ ಘೋಷಣೆ
- ಮುಂದಿನ ಅಧಿವೇಶನದಲ್ಲಿ ವಿಧೇಯಕ
- ಉದ್ಯಮಿಗಳಿಗೆ ಅನುಕೂಲ
- 30 ದಿನಗಳಲ್ಲಿ ಖರೀದಿ ಪೂರ್ಣ

ಸಂ.ಕ.ಸಮಾಚಾರ, ಬೆಂಗಳೂರು

ರಾಜ್ಯದಲ್ಲಿ ಸುಲಲಿತ ಬಂಡವಾಳ ಹೂಡಿಕೆಗೆ ಅಡ್ಡಿಯಾಗಿರುವ ಭೂ ಕಂದಾಯ ಭೂಮಿ ಖರೀದಿ ಕಾಯ್ದೆ (109)ಕ್ಕೆ ಮುಂದಿನ ತಿಂಗಳು 17ರಿಂದ ಆರಂಭ ಆಗುವ ವಿಧಾನಮಂಡಲ ಅಧಿವೇಶನದಲ್ಲಿ ತಿದ್ದುಪಡಿ ತರಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ದಾವೋಸ್ ಆರ್ಥಿಕ ಶೃಂಗಸಭೆಯಲ್ಲಿ ಭಾಗವಹಿಸಿ ಮರಳಿರುವ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಶನಿವಾರ ತಮ್ಮ ಗೃಹ ಕಚೇರಿ ಕೃಷ್ಣಾದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ಪ್ರಕಟಿಸಿದರು. ಭೂಮಿ ಖರೀದಿ ಪ್ರಕ್ರಿಯೆ ಈಗಿರುವ 60 ದಿನಗಳ ಬದಲಾಗಿ 30 ದಿನಕ್ಕೆ ಇಳಿಸಿ ಪ್ರಸ್ತುತ ಆಗುತ್ತಿರುವ ವಿಳಂಬ ತಪ್ಪಿಸುವುದು ಇದರ ಉದ್ದೇಶ. ಭೂಮಿ ಮಾರುವ ರೈತ ಹಾಗೂ ಖರೀದಿ ಮಾಡುವ ಉದ್ಯಮಿ ನೇರ ಒಪ್ಪಂದ ಮಾಡಿಕೊಳ್ಳಬಹುದು. ಇದರಲ್ಲಿ ಸರ್ಕಾರದ ಪಾತ್ರವಾಗಲಿ, ಒತ್ತಡವಾಗಲಿ ಇರುವುದಿಲ್ಲ. ಈ ತಿದ್ದುಪಡಿಯಿಂದ ರೈತರಿಗೆ ಯೋಗ್ಯ ಬೆಲೆ ಸಿಗಲಿದೆ ಎಂದು ಹೇಳಿದರು.

ದಾವೋಸ್‌ನಲ್ಲಿ ಭೇಟಿಯಾಗಿದ್ದ ಉದ್ಯಮಿಗಳು ರಾಜ್ಯದಲ್ಲಿ ಹೂಡಿಕೆ ಮಾಡಲು ಆಸಕ್ತಿ ವಹಿಸಿದ್ದಾರೆ. ನಿರ್ದಿಷ್ಟವಾಗಿ ಇಷ್ಟೇ ಬಂಡವಾಳ ಹರಿದು ಬರಲಿದೆ ಎಂದು ಹೇಳಲು ಸಾಧ್ಯವಿಲ್ಲ. ಆದರೆ ಸಾವಿರಾರು ಕೋಟಿ ರೂ. ಹೂಡಿಕೆ ಆಗಲಿದೆ. ಬೆಂಗಳೂರಿನಲ್ಲಿ ಮುಂದಿನ ನವೆಂಬರ್‌ನಲ್ಲಿ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಇದು ಖಚಿತವಾಗಲಿದೆ ಎಂದರು.

ದಾವೋಸ್ ಸಮಾವೇಶದಲ್ಲಿ ಸೆಂಟರ್ ಫಾರ್ ಇಂಟರ್‌ನೆಟ್ ಆಫ್ ಎಥಿಕಲ್ ಥಿಂಕ್ಸ್ ಒಪ್ಪಂದಕ್ಕೆ ಅನೌಪಚಾರಿಕವಾಗಿ ಸಹಿ ಹಾಕಲಾಗಿದೆ. ಈ ಕೇಂದ್ರವು ಬುದ್ಧಿ ಮತ್ತೆ ದುರುಪಯೋಗ ತಡೆಯುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಇದಲ್ಲದೇ ಬಹ್ರೈನ್ ಎಕನಾಮಿಕ್ ಡೆವಲಪ್‌ಮೆಂಟ್ ಮಂಡಳಿಯೊಂದಿಗೆ ಫಿನ್ ಟೆಕ್, ಕೃತಕ ಬುದ್ಧಿಮತ್ತೆ ಮತ್ತು ಸೈಬರ್ ಸೆಕ್ಯುರಿಟಿ ವಿಷಯಗಳ ಕುರಿತು ಒಪ್ಪಂದಕ್ಕೆ ಬರಲಾಗಿದೆ. ಜಗತ್ತಿನ ದೊಡ್ಡ ಉದ್ಯಮಿಗಳಾದ ಲಕ್ಷ್ಮೀಮಿತ್ತಲ್, ಅರವಿಂದ್ ಕಿರ್ಲೋಸ್ಕರ್ ಮುಂತಾದವರ ಜತೆ ಸಮಾಲೋಚನೆ ನಡೆಸಲಾಯಿತು ಎಂದರು. ನೋವೋನೊರಸ್ಡಿಕ್ ಕಂಪನಿ ರಾಜ್ಯದ ಮಧುಮೇಹಿ ರೋಗಿಗಳ ಆರೋಗ್ಯ ಸುಧಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ರೂಪಿಸಿ ನಿರ್ವಹಿಸಲು ಒಪ್ಪಿದ್ದಾರೆ. ಇದರಿಂದ ಮಧುಮೇಹಿಗಳಿಗೆ ಕಡಿಮೆ ದರದಲ್ಲಿ ಔಷಧಿಗಳು ಲಭ್ಯ ಆಗಲಿದೆ. ರಾಜ್ಯದಲ್ಲಿ ಹೆಚ್ಚು ಉದ್ಯೋಗ ಸೃಷ್ಟಿ ಮಾಡಲು ಸರ್ಕಾರ ಬದ್ಧವಾಗಿದೆ. ಬೆಂಗಳೂರಿನ ಹೊರಗೆ ಸ್ಥಾಪಿಸಲಿರುವ ಉದ್ಯಮಗಳಿಗೆ ಹೆಚ್ಚಿನ ರಿಯಾಯಿತಿ ದೊರೆಯಲಿದೆ ಎಂದು ಹೇಳಿದರು.

ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಮಾತನಾಡಿ ಭೂ ಖರೀದಿ ಕಾಯ್ದೆಗೆ ತರುವ ತಿದ್ದುಪಡಿಯಿಂದ ರೈತರಿಗೆ ಭೂ ಮಾರಾಟದ ಹೆಚ್ಚಿನ ಅವಕಾಶ ಸಿಗುತ್ತದೆ. ಉದ್ಯಮಿಗಳ ಜತೆ ಮಾತನಾಡಿ ಮಾರಾಟ ಮಾಡಬಹುದು. ಹಣ ನೇರವಾಗಿ ಸಿಗುತ್ತದೆ. ಕೈಗಾರಿಕೆಗಳಿಗಾಗಿ ಮೀಸಲಿರುವ ಭೂ ಬ್ಯಾಂಕ್‌ನಲ್ಲಿ 12 ಎಕರೆ ಜಮೀನಿದೆ ಎಂದರು. ಗೃಹ ಸಚಿವ ಬಸವರಾಜ ಬೊಮ್ಮಾಯಿ, ಮುಖ್ಯ ಕಾರ್ಯದರ್ಶಿ ವಿಜಯಭಾಸ್ಕರ್ ಮುಂತಾದವರಿದ್ದರು.

## ಅನ್ಯಾಯ ಆಗುತಿತ್ತು

ದಾವೋಸ್‌ಗೆ ಹೋಗುವಾಗ ಹಿಂಜರಿಕೆಯಿಂದ ಹೋದೆವು. ಆದರೆ ಅಲ್ಲಿ ಹೋದ ಮೇಲೆ ಅದು ಮಾಯವಾಯ್ತು. ರಾಜ್ಯದಲ್ಲಿ ಹೂಡಿಕೆಗೆ ಉತ್ತಮ ಪ್ರತಿಕ್ರಿಯೆ ಬಂದಿದೆ. ಹೋಗದಿದ್ದರೆ ಅನ್ಯಾಯ ಆಗುತಿತ್ತು

। ಯಡಿಯೂರಪ್ಪ, ಮುಖ್ಯಮಂತ್ರಿ

## 2 ಸಾವಿರ ಕೋಟಿ ರೂ. ಹೂಡಿಕೆ

ಲುಲು ಕಂಪನಿ ರಾಜ್ಯದಲ್ಲಿ 2 ಸಾವಿರ ಕೋಟಿ ರೂ. ಬಂಡವಾಳ ಹೂಡಿಕೆಗೆ ಒಪ್ಪಿದೆ. ತರಕಾರಿ, ಹಣ್ಣು, ಹೂ ಇತರೆ ಬೆಳೆಗಳನ್ನು ನಗರಗಳಿಗೆ ಸಾಗಾಣಿಕೆ ಮಾಡಲು ಜಾಲ ರೂಪಿಸಲಿದೆ ಎಂದು ಮುಖ್ಯಮಂತ್ರಿಗಳು ತಿಳಿಸಿದರು.